ದಿನಾಂಕ : 31-01-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಕಲಂ 223 ಬಿ.ಎನ್.ಎಸ್.ಎಸ್ ಅಡಿ ಸ್ವಪ್ರಮಾಣೀಕೃತ ಹೇಳಿಕೆ**

5. ಆಶ್ರಯ ಗೃಹ ನಿರ್ಮಾಣ ಸಂಘವು ತನ್ನ ಗೊತ್ತುವಳಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನರಿಗೆ ನಿವೇಶನಗಳನ್ನು ಕಾಯ್ದಿರಿಸಲಾಗಿತ್ತು. ಸದರಿ ನಿವೇಶನಗಳು ಸದಲಗಾ ಪಟ್ಟಣದ ಅಭಿವೃದ್ಧಿ ಹೊಂದಿದ ಕ್ಷೇತ್ರದಲ್ಲಿ ಬರುತ್ತವೆ, ಆದರೆ ಈ ಕ್ಷೇತ್ರದಲ್ಲಿ ಸದಲಗಾ ಪಟ್ಟಣದ ಪ್ರಭಾವಿ ವ್ಯಕ್ತಿಗಳು ವಾಸ ಮಾಡುತ್ತಿದ್ದು ಇಂತಹ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದರೆ ಸದರಿ ಕ್ಷೇತ್ರದ ಶೋಭೆ ಹೋಗುತ್ತದೆ ಹಾಗೂ ಪ್ರಭಾವಿ ವ್ಯಕ್ತಿಗಳಿಗೆ ಈ ಕೆಳ ವರ್ಗದ ಜನರಿಂದ ಮೈಲಿಗೆ ಸೂಸುವ ದಿನಾಲೂ ಅನುಭವಿಸಬೇಕಾಗುತ್ತದೆ, ಆದ್ದರಿಂದ ಸಂಘದ ಅಧ್ಯಕ್ಷರು, ಸಂಚಾಲಕರು ಮತ್ತು ಸದಸ್ಯರು ಎಲ್ಲಾ ಕೂಡಿ ತಮ್ಮ ಮನಸ್ಸಿ ನಲ್ಲಿರುವ ಜಾತಿ ಬೇಧ ಭಾವದಿಂದ ಸದರಿ ಅಭಿವೃದ್ಧಿ ಹೊಂದಿದ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನರಿಗೆ ನೀಡಕೂಡದು ಎಂದು ತೀರ್ಮಾನಿಸಿರುತ್ತಾರೆ.

6. ಸದರಿ ಈ ಕೃತ್ಯದಲ್ಲಿ ಸಂಘದ ಅಧ್ಯಕ್ಷರು, ಸಂಚಾಲಕರು ಹಾಗೂ ಸದಸ್ಯರು 1-29 ಜನರು ಪಾಲುಗೊಂಡಿದ್ದು ಸದರಿ 1-29 ರವರ ಪೂರ್ಣ ಹೆಸರು ಮತ್ತು ವಿಳಾಸವನ್ನು ಹಾಗೂ ಅವರು ಮಾಡಿದ ಕೃತ್ಯವನ್ನು ನನ್ನ ಖಾಸಗಿ ಪಿರ್ಯಾದಿಯಲ್ಲಿ ವಿವರವಾಗಿ ನಮೂದು ಮಾಡಿರುತ್ತೇನೆ. ಈ ಪ್ರಕರಣದ 1-29 ಜನರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನರಿಗೆ ಮೋಸ, ವಂಚನೆ ಮತ್ತು ಜಾತೀಯತೆ ಮಾಡಿ ಅವರಿಗೆ ಬರಬೇಕಾದಂತಹ ಎಲ್ಲಾ ಸೌಲಭ್ಯಗಳನ್ನು ಕಬಳಿಸಿಕೊಂಡು ಅನ್ಯಾಯಾ ಮಾಡಿರುತ್ತಾರೆ.

7. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯ ದೊರಕಿಸಿಕೊಡುವ ಸಲುವಾಗಿ ನಾನು ದಿಃ 30.09.2024 ರಂದು ಸದಲಗಾ ಪೋಲಿಸ ಠಾಣೆಗೆ ಖುದ್ದಾಗಿ ಹಾಜರಾಗಿ ನಾನು ಲಿಖಿತ ಪಿರ್ಯಾದಿಯೊಂದಿಗೆ ದಾಖಲಾತಿಗಳೊಂದಿಗೆ ಹೋಗಿ ದೂರು ಕೊಟ್ಟಿದ್ದು ಆದರೆ ಸದಲಗಾ ಪೋಲಿಸ ಉಪ ನೀರಿಕ್ಷಕರು ನನ್ನ ದೂರನ್ನು ಸ್ವೀಕಾರ ಮಾಡದೇ ಸ್ವೀಕೃತಿ ಪತ್ರವನ್ನು ನೀಡಿರುವುದಿಲ್ಲ ಹಾಗೂ ಸಂಘದಲ್ಲಿ ಪ್ರಭಾವಿ ವ್ಯಕ್ತಿಗಳು ಇರುವುದರಿಂದ ಅವರ ಪ್ರಭಾವಕ್ಕೆ ಒಳಗಾಗಿ ಯಾವುದೇ ಸೂಕ್ತ ಕ್ರಮವನ್ನು ಜರುಗಿಸಿ ನಮ್ಮ ಜನಾಂಗಕ್ಕೆ ನ್ಯಾಯ ದೊರಕಿಸಿ ಕೊಡಲಿಲ್ಲ. ಆದ ಕಾರಣ ನಂತರ ನಾನು ದಿಃ 10.10.2024 ರಂದು ಮಾನ್ಯ ಡಿ.ವೈ.ಎಸ್.ಪಿ ಚಿಕ್ಕೋಡಿ ಇವರ ಕಛೇರಿಗೆ ಖುದ್ದಾಗಿ ಹಾಜರಾಗಿ ಲಿಖಿತ ರೂಪದಲ್ಲಿ ದಾಖಲಾತಿಗಳೊಂದಿಗೆ ದೂರನ್ನು ನೀಡಿರುತ್ತೇನೆ.

8. ಮಾನ್ಯ ಡಿ.ವೈ.ಎಸ್.ಪಿ ಚಿಕ್ಕೋಡಿ ಇವರು ನನ್ನ ದೂರನ್ನು ಸ್ವೀಕರಿಸಿ ಅದರ ಸ್ವೀಕೃತಿ ಪತ್ರವನ್ನು ನೀಡಿರುತ್ತಾರೆ. ಸದರಿ ಸ್ವೀಕೃತಿ ಪತ್ರವನ್ನು ನನ್ನ ಖಾಸಗಿ ದೂರಿನೊಂದಿಗೆ ಲಗತ್ತಿಸಿರುತ್ತೇನೆ. ನನ್ನ ದೂರನ್ನು ಮಾನ್ಯ ಡಿ.ವೈ.ಎಸ್.ಪಿ ಚಿಕ್ಕೋಡಿ ಇವರು ಸ್ವೀಕರಿಸಿದ ನಂತರ ಸಂಘದಲ್ಲಿ ಪ್ರಭಾವಿ ವ್ಯಕ್ತಿಗಳು ಇರುವುದರಿಂದ ಅವರ ಪ್ರಭಾವಕ್ಕೆ ಒಳಗಾಗಿ ಯಾವುದೇ ಸೂಕ್ತ ಕಾನೂನು ಕ್ರಮ ಕೈಗೊಳ್ಳದೇ ನಮಗೆ ನ್ಯಾಯ ದೊರಕಿಸಿ ಕೊಡಲಿಲ್ಲ.

9. ಪುನಃ ನಾನು ದಿಃ 14.10.2024 ರಂದು ಸದಲಗಾ ಪೋಲಿಸ ಠಾಣೆಯ ಠಾಣಾಧಿಕಾರಿಯಾದಂತಹ ಪಿ.ಎಸ್.ಐ ರವರಿಗೆ ನೊಂದಾಯಿತ ಅಂಚೆ (RPAD) ಮುಖಾಂತರ ದೂರನ್ನು ಕಳುಹಿಸಿಕೊಟ್ಟಿರುತ್ತೇನೆ. ಸದರಿಯವರು ದಿಃ 15.10.2024 ರಂದು ನಾನು ಕಳುಹಿಸಿದ ದೂರನ್ನು ಸ್ವೀಕಾರ ಮಾಡಿದ ಬಗ್ಗೆ ಅಂಚೆ ಸ್ವೀಕೃತಿ ಬಂದಿದ್ದು ಇರುತ್ತದೆ. ತದನಂತರ ನಾನು ನ್ಯಾಯಕ್ಕಾಗಿ ದಿಃ15.10.2024 ರಂದು ಮಾನ್ಯ ಜಿಲ್ಲಾ ಪೋಲಿಸ ವರಿಷ್ಠಾಧಿಕಾರಿ ಬೆಳಗಾವಿ ಮತ್ತು ಮಾನ್ಯ ಜಿಲ್ಲಾಧಿಕಾರಿ ಬೆಳಗಾವಿ ಇವರಿಗೆ ನೊಂದಾಯಿತ ಅಂಚೆ (RPAD) ಮುಖಾಂತರ ದೂರನ್ನು ಕಳುಹಿಸಿಕೊಟ್ಟಿರುತ್ತೇನೆ. ಸದರಿಯವರೂ ಸಹ ಯಾವುದೇ ಸೂಕ್ತ

ಕಾನೂನು ಕ್ರಮ ಜರುಗಿಸಲಿಲ್ಲ. ಕೊನೆಯದಾಗಿ ನ್ಯಾಯಕ್ಕಾಗಿ ಈ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ದಾಖಲಿಸಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.